**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 31/2019 ಸಿ.ಡಬ್ಲೂ.9 ಪಿ.ಡಬ್ಲೂ.7

| | |
|---|---|
| ಹೆಸರು | ಖಾಜಹುಸೇನಿ |
| ತಂದೆ/ಗಂಡ | ಮಹಿಬೂಬ್ ಅಲಿ |
| ವಯಸ್ಸು | 45 ವರ್ಷ |
| ಉದ್ಯೋಗ | ಪಿ.ಐ ಎಮ್ ಬಿ ನಗರ ಕಲಬುರಗಿ |
| ವಾಸಸ್ಥಳ | ಕಲಬುರಗಿ |

ದಿನಾಂಕ 30-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಾನು 03.10.2018 ರಿಂದ 15.06.2019 ರವರೆಗೆ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 14-10-2018 ರಂದು ಚಾಸಾ-7 ರವರಿಂದ ಕಡತವನ್ನು ಪಡೆದುಕೊಂಡು ಅದೇ ದಿನ ಚಾಸ-2 ಮತ್ತು 3ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಜಪ್ತಿ ಪಂಚನಾಮೆಯನ್ನುಕೈಗೊಂಡು ಸ್ಥಳದಿಂದ 1 ಬಾರಕೋಲನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿತರನ್ನು ದಸ್ತಗಿರಿ ಮಾಡಿ ಯೋಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 17.10.2018 ರಂದು ಚಾಸಾ-1ರವರು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಜಪ್ತಿಪಂಚಾನಾಮೆಯಲ್ಲಿ ಇರುವ ಅವರ ತಿದ್ದುಪಡಿಯಾದ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಪಂಚನಾಮೆಯನ್ನು ನಿಪಿ-7 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು 7 (ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ.1ನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಡಿ ಬಿ ವಕೀಲರಿಂದ:</u>

ನಾನು ದಿಃ 14.10.2019 ರಂದು ಠಾಣೆಯಲ್ಲಿ ಚಾಸ-7ರವರ ಕಡೆಯಿಂದ ಕಡತವನ್ನು ಪಡೆದಿರುತ್ತೇನೆ ಆದರೆ ಸಮಯ ನನಗೆ ನೆನಪಿರುವುದಿಲ್ಲ. ಠಾಣೆಯಿಂದ ಘಟನಾ ಸ್ಥಳವು 12.00 ಕೀಮೀ ಅಂತರದಲ್ಲಿ ಇರುತ್ತದೆ.

ನಾವು ಎಷ್ಟು ಗಂಟೆಗೆ ಠಾಣೆಯನ್ನು ಬಿಟ್ಟಿರುತ್ತೇವೆ ಎಂದು ನೆನಪಿಲ್ಲ ಆಗ ಠಾಣೆಯಲ್ಲಿ ನಾನು ನಮ್ಮ ಠಾಣಾ ಬರಹಗಾರರು ಇದ್ದರು. ಚಾಸ-1ರವರು ನನಗೆ ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ನಾನು ಘಟನಾ ಸ್ಥಳದಲ್ಲಿ 2.00 ರಿಂದ 3.00 ಗಂಟೆಯವರಗೆ ಇದ್ದೇನು. ಮು.ಮಾ-1 ಘಟನಾ ಸ್ಥಳದಲ್ಲಿ ಇತ್ತು ಅದನ್ನು ಚಾಸಾ-1ರವರು ತೋರಸಿರುತ್ತಾರೆ. ನಿಪಿ-4ರಲ್ಲಿ ಗಾಯಳುವನ್ನು ಹೆಚ್ಚಿ ನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಬೇಕು ಎಂದು ನಮೂದು ಇದೆ ಎಂದರೆ ಸರಿ ನಾನು ಗುನ್ಹಾ ಸ್ಥಳದಲ್ಲಿ ಪಂಚನಾಮೆ ಮಾಡುವಾಗ ಚಾಸ-1ರವರು ಸ್ಥಳದಲ್ಲಿ ಹಾಜರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸ-7ರವರ ಕಡೆಯಿಂದ ಕಡತವನ್ನು ಪಡೆದುಕೊಂಡ ನಂತರ ಅವರು ಎಲ್ಲಿಯವರೆಗೆ ತನಿಖೆ ಮಾಡಿರುತ್ತಾರೆ ಮತ್ತು ನಾನು ಏನು ತನಿಖೆ ಮಾಡಬೇಕು ಅಂತಾ ವಿಚಾರಣೆ ಮಾಡಿರುತ್ತೇನೆ. ನಾನು ಚಾಸಾ-7ರವರಿಗೆ ಅವರು ಅದೇ ದಿನ ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿದ್ದು ಆ ಸಮಯದಲ್ಲಿ ಯಾವ ಕಾರಣಕ್ಕಾಗಿ ಅವರು ಮು.ಮಾಲನ್ನು ಸ್ಥಳದಿಂದ ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದು ವಿಚಾರಣೆ ಮಾಡಿರುವುದಿಲ್ಲ. ಗಾಯದ ಪ್ರಮಾಣಪತ್ರ, ಬಂಧನ ಪತ್ರ ಮತ್ತು ಅಂತಿಮ ವರದಿಯ ಮೇಲೆ ಇರುವ ಸಹಿ ಒಂದೇ ತರಹ ಇದ್ದು ಆದರೆ ನಿಪಿ-7ರ ಮೇಲೆ ಇರುವ ಸಹಿ ಬೇರೆ ಇದ್ದು ಎರಡು ಸಹಿಗಳಿಗೆ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-7ರ ಮೇಲೆ ಪಂಚರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಕಣ್ ತಪ್ಪಿ ನಿಂದ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ರೀತಿ ತನಿಖೆಯನ್ನು ಮತ್ತು ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡದೇ ಇದ್ದರು ಸಹಿತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಠಾಣೆಯಲ್ಲೆಯೇ ಕುಳಿತು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ